**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ.ಶರವಣ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ: ಕೆರೆಗಳ ಭರ್ತಿಯಿಂದ ನೀರಾವರಿ ಸೌಲಭ್ಯಕ್ಕೆ ಬೇಡಿಕೆಗಳು ಏರುಮುಖವಾಗಿವೆ. ಆದರೆ ರಾಜ್ಯ ಸರ್ಕಾರದ ಪ್ರಯತ್ನ, ಇಚ್ಛಾಶಕ್ತಿ ಇಳಿಮುಖದ ಹಾದಿಯಲ್ಲಿ ಸಾಗಿದೆ. 'ನುಡಿದಂತೆ ನಡೆಯುತ್ತಿದ್ದೇವೆ' ಎಂದು ಹೇಳಿಕೊಳ್ಳುತ್ತಿರುವ ಅವಧಿಯಲ್ಲಿ ಪರಿಸ್ಥಿತಿ ಸುಧಾರಿಸಿಲ್ಲ. ಐದು ವರ್ಷಗಳಲ್ಲಿ ನೀರಾವರಿ ಯೋಜನೆಗಳಿಗೆ 1.50 ಲಕ್ಷ ಕೋಟಿ ರೂ. ಖರ್ಚು ಮಾಡಲಾಗುವುದು. ಇದರಲ್ಲಿ ಕೃಷ್ಣಾ ಮೇಲ್ದಂಡೆ ಮೂರನೇ ಹಂತದ 11 ಯೋಜನೆಗಳನ್ನು ಪೂರ್ಣಗೊಳಿಸಲು ಪ್ರತಿ ವರ್ಷ 10 ಸಾವಿರ ಕೋಟಿ ರೂ. ವಿನಿಯೋಗಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು, ಆದರೆ ಅಧಿಕಾರಕ್ಕೆ ಬಂದ ನಂತರ ಮೊದಲ ವರ್ಷ ಬಾರಿ ಮತ್ತು ಮಧ್ಯಮ ಗಾತ್ರದ ಯೋಜನೆಗಳಿಗೆ 18,530/- ಕೋಟಿ ರೂ.ಗಳು. ವಿನಿಯೋಗಿಸಿ 21,782 ಹೆಕ್ಟೇರ್ ಪ್ರದೇಶಕ್ಕೆ ಹೊಸದಾಗಿ ನೀರಾವರಿ ಸವಲತ್ತು ಕಲ್ಪಿಸಿದೆ. ಹೊಸ ಯೋಜನೆಗಳಿಲ್ಲವಾದರೂ ಹಿಂದಿನ ಸರ್ಕಾರ ಅಂದಾಜು ವೆಚ್ಚಕ್ಕೆ ಮಂಜೂರು, ಅನುದಾನ ಬಿಡುಗಡೆ ಮಾಡಿದ್ದನ್ನು ಮುಂದುವರಿಸಿ ಪೂರ್ಣಗೊಳಿಸಿದೆಯಷ್ಟೇ. ಆಹಾರ ಭದ್ರತೆ, ಉದ್ಯೋಗಾವಕಾಶ ಸೃಷ್ಟಿ, ಜೀವನಮಟ್ಟ ಸುಧಾರಣೆ, ಸುಸ್ಥಿರ ಅಭಿವೃದ್ಧಿಗೆ ಕೃಷಿಯೇ ಅಡಿಪಾಯ ಇದರ ಮೇಲೆ ಉದ್ಯಮ-ವಹಿವಾಟು ಇನ್ನಿತರ ವಲಯಗಳನ್ನು ಕಟ್ಟಿ ಬದುಕು-ಭವಿಷ್ಯ ಸುಭದ್ರವಾಗಿರುತ್ತದೆ. ಕರ್ನಾಟಕ ಹೆಚ್ಚು ಒಣ ಭೂಮಿ ಪದೇಪದೆ ಅನಾವೃಷ್ಟಿ ಎದುರಿಸುವ ಕರ್ನಾಟಕಕ್ಕೆ 2ನೇ ಸ್ಥಾನವಿದೆ. ಈ ಹಣೆಪಟ್ಟಿ ಕಳಚುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಿಲ್ಲ. ಹೊಸದಾಗಿ 34.95 ಲಕ್ಷ ನೀರಾವರಿ ಪ್ರದೇಶ ಸೃಜನೆ ಸಾಮರ್ಥ್ಯ ರಾಜ್ಯಕ್ಕಿದೆ. ಆದರೆ ದೂರಗಾಮಿ ಪ್ರಯೋಜನ, ಫಲ ನೀಡುವ ನೀರಾವರಿ ಯೋಜನೆಗಳು ಕಡತದಲ್ಲಿ ಸುಂದರವಾಗಿ ಕಾಣುತ್ತವೆ. ಜಲ ಸಂಪನ್ಮೂಲ ಇಲಾಖೆಗೆ ವರ್ಷಕ್ಕಿಷ್ಟು ಅನುದಾನ ಕಡಿತವಾಗುತ್ತಲಿದೆ. ಇದರಿಂದ ಯೋಜನಾ ಅಂದಾಜು ವೆಚ್ಚ ಪರಿಷ್ಕರಣೆಯಾಗುತ್ತಲಿದೆ. ಇದು ಉತ್ತಮ ಬೆಳವಣಿಗೆಯಲ್ಲವೆಂಬ ನೀರಾವರಿ ತಜ್ಞರ ಆಕ್ಷೇಪಕ್ಕೆ ತಜ್ಞರು ಧ್ವನಿಗೂಡಿಸುತ್ತಾರೆ. ಇನ್ನೂ ಯುಕೆಪಿ 3ನೇ ಹಂತದಡಿ ರಾಜ್ಯಕ್ಕೆ ಹಂಚಿಕೆಯಾದ ನೀರಿನ ಬಳಕೆಗೆ ಕೃಷ್ಣಾ 2ನೇ ನ್ಯಾಯಾಧೀಕರಣ ಐತೀರ್ಪಿನ ಅಂತಿಮ ಅಧಿಸೂಚನೆ ನೆಪದಲ್ಲಿ ಸರ್ಕಾರ ಕಾಲಹರಣ ಮಾಡುತ್ತಿದೆ. ಅಧಿಸೂಚನೆಗೆ ಮುನ್ನ ನೀರು ಸಂಗ್ರಹ, ನೀರಾವರಿ ಜಾಲ ಸೃಜನೆಗೆ ಬೇಕಾದ ಸಿದ್ಧತೆ ಕಡೆಗಣಿಸಿದೆ. ಮುಂದುವರೆದು, ನೀರಾವರಿ ಯೋಜನೆಗಳಿಗೆ SCP/TSP ಯೋಜನೆಗಳಿಗೆ ಅನುದಾನ ಪಾತಾಳಕ್ಕೆ ಇಳಿದಿದೆ. ಉದಾ:- 2023-24ರಲ್ಲಿ SCP/TSP ಯಡಿ ವ್ಯಯಿಸಿದ್ದು ಕೇವಲ 79.50 ಕೆ. ರೂ. ವಂಚಿತ ಸಮುದಾಯಗಳ ನೆರವಿ ಬಹುದೊಡ್ಡ ಸಂಚಕಾರ ಉಂಟಾಗಿರುವುದು ಅಧಿಕೃತ ಅಂಕಿ-ಅಂಶಗಳು ಸಾರುತ್ತದೆ.**

**ಈ ವಿಷಯದ ಬಗ್ಗೆ ದಿನಾಂಕ 04.03.2025 ರಂದು ವಿಜಯವಾಣಿ ದಿನ ಪತ್ರಿಕೆ ಪ್ರಕಟಗೊಂಡಿರುವ ಸಂಪಾದಕೀಯ ನಕಲು ಲಗತ್ತಿಸಿರುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.**

***

ದಿನಾಂಕ:30.12.2010 ರಂದು ಕೃಷ್ಣಾ ನ್ಯಾಯಾಧೀಕರಣ-2 ಕೃಷ್ಣಾ ನದಿಯ ನೀರಿನ ಹಂಚಿಕೆಯ ಅಂತಿಮ ತೀರ್ಪಿನಡಿ ಕರ್ನಾಟಕ ರಾಜ್ಯಕ್ಕೆ 173 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಗೆ 130 ಟಿಎಂಸಿ ನೀರಿನ ಹಂಚಿಕೆ ನಿಗಧಿಪಡಿಸಿದ್ದು, ಯೋಜನೆಗೆ ಹಂಚಿಕೆಯಾದ ನೀರಿನ ಬಳಕೆಯು ಕೃಷ್ಣಾ ನ್ಯಾಯಾಧಿಕರಣ-2 ರ ಅಂತಿಮ ತೀರ್ಪು ಕೇಂದ್ರ ಸರ್ಕಾರದ ಗೆಜೆಟ್ ಅಧಿಸೂಚನೆಗೆ ಒಳಪಟ್ಟಿರುತ್ತದೆ.

ಕೃ.ಮೇ.ಯೋ. ಹಂತ-3 ರಡಿ ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದಡಿ ನೀರಿನ ಸಂಗ್ರಹಣೆ RL:519.60 ಒಣ. ರಿಂದ RL:524.256 Mt. ರವರೆಗೆ ಎತ್ತರಿಸುವುದು ಒಳಗೊಂಡಿದ್ದು, 9 ಉಪ ಯೋಜನೆಗಳ ಅನುಷ್ಠಾನದೊಂದಿಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣಾ ಮಟ್ಟವನ್ನು ಎತ್ತರಿಸುವುದರಿಂದ ಹೆಚ್ಚುವರಿಯಾಗಿ 100 ಟಿ.ಎಂ.ಸಿ. ನೀರು ಸಂಗ್ರಹಣೆಯಾಗಲಿದೆ. ಇದರಿಂದಾಗಿ ಉತ್ತರ ಕರ್ನಾಟಕದ 07 ಜಿಲ್ಲೆಗಳಾದ ವಿಜಯಪುರ, ಬಾಗಲಕೋಟ, ಕಲಬುರಗಿ, ಯಾದಗಿರಿ, ರಾಯಚೂರ, ಕೊಪ್ಪಳ & ಗದಗ ವ್ಯಾಪ್ತಿಯ 5.94 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವುದಾಗಿರುತ್ತದೆ.

ಸರ್ಕಾರವು ಆದೇಶ ದಿನಾಂಕ:09.10.2017 ರನ್ವಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ ರೂ.51,148.94 ಕೋಟಿ, (Price Level 2014-15) ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಪೈಕಿ ಭೂಸ್ವಾಧೀನ ಮತ್ತು ಪುನರ್‌ವಸತಿ & ಪುನರ್‌ನಿರ್ಮಾಣಕ್ಕಾಗಿ ರೂ.30,143.17 ಕೋಟಿ ಮೊತ್ತವನ್ನು ಮೀಸಲಿಡಲಾಗಿರುತ್ತದೆ.

ಈಗಾಗಲೇ, ಸರ್ಕಾರದ ಆಡಳಿತಾತ್ಮಕ ಅನುಮೋದನೆಯೊಂದಿಗೆ ಹಂತ-3 ರಡಿಯ ಎಲ್ಲಾ 9 ಉಪಯೋಜನೆಗಳಡಿ ಪ್ರಮುಖವಾಗಿ ಮುಖ್ಯಸ್ಥಾವರ, ಮುಖ್ಯ ಕಾಲುವೆ, ಶಾಖಾಕಾಲುವೆ ಜಾಲಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು ಪೂರ್ಣಗೊಂಡ ಕಾಲುವೆ ಜಾಲಗಳಡಿ ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿದೆ.

ಆಲಮಟ್ಟಿ ಜಲಾಶಯದ ಗೇಟನ್ನು ಎತ್ತರಿಸಿದಾಗ ಜಲಾಶಯದ ಹಿನ್ನೀರಿನಲ್ಲಿ 188 ಗ್ರಾಮಗಳಿಗೆ ಸಂಬಂಧಿಸಿದಂತೆ, ಮುಳುಗಡೆ ಹೊಂದುವ 75,563 ಎಕರೆ ಜಮೀನುಗಳ ಭೂಸ್ವಾಧೀನತೆ, ಮುಳುಗಡೆ ಹೊಂದಲಿರುವ 20 ಗ್ರಾಮ ಮತ್ತು ಬಾಗಲಕೋಟೆ ಪಟ್ಟಣದ 10 ವಾರ್ಡ್‌ಗಳ ಪುನರ್‌ವಸತಿ 6,467 ಎಕರೆ ಜಮೀನು ಹಾಗೂ ಕಾಲುವೆಗಳ ಜಾಲಗಳ ನಿರ್ಮಾಣಕ್ಕಾಗಿ 51,837 ಎಕರೆ ಒಳಗೊಂಡಂತೆ ಒಟ್ಟಾರೆ 1.34 ಲಕ್ಷ ಎಕರೆ ಜಮೀನು ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳುವುದಾಗಿರುತ್ತದೆ. ಇಲ್ಲಿಯವರೆಗೆ 28,903 ಎಕರೆ ಕ್ಷೇತ್ರವನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಬಾಕಿ ಕ್ಷೇತ್ರವು ವಿವಿಧ ಹಂತದ ಭೂಸ್ವಾಧೀನ ಪ್ರಕ್ರಿಯೆ ಹಂತದಲ್ಲಿರುತ್ತದೆ.

ಹಂತ-3ರ ಅನುಷ್ಠಾನಕ್ಕಾಗಿ ಕಾಮಗಾರಿ, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ (ಬಿಟಿಡಿಎ ಒಳಗೊಂಡಂತೆ) ಸೇರಿ ಒಟ್ಟಾರೆ ಡಿಸೆಂಬರ್-2024ರ ಅಂತ್ಯದವರೆಗೆ ರೂ.18,861/- ಕೋಟಿ ವೆಚ್ಚವನ್ನು ಭರಿಸಲಾಗಿರುತ್ತದೆ ಹಾಗೂ 1.35 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ನೀರಾವರಿ ಕ್ಷೇತ್ರವನ್ನು ಸೃಜಿಸಲಾಗಿರುತ್ತದೆ. ಅಲ್ಲದೇ, ಸಮಾನಾಂತರವಾಗಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು Gravity ಮುಖಾಂತರ ನೀರು ಹರಿಸಿ ತುಂಬಿಸಲು ಅವಶ್ಯಕ ವಿತರಣಾ ಕಾಲುವೆ ಜಾಲದ ಕಾಮಗಾರಿಗಳನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದ್ದು ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

ದಿನಾಂಕ:16.09.2011ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದೆ. ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಗೆಜೆಟ್ ಅಧಿಸೂಚನೆ ಹೊರಡಿಸಲು ಎಲ್ಲಾ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಕೇಂದ್ರ ಸರ್ಕಾರದ ಜೊತೆಗೆ ಸಮನ್ವಯ ಸಾಧಿಸಲಾಗುತಿದ್ದು, ಅಧಿಸೂಚನೆ ಹೊರಡಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕೇಂದ್ರ ಸರ್ಕಾರದ ಜಲ ಶಕ್ತಿ ಸಚಿವಾಲಯದ ಮಾನ್ಯ ಸಚಿವರನ್ನು ಭೇಟಿ ಮಾಡಿ ಕೃಷ್ಣಾ ನ್ಯಾಯಾಧೀಕರಣ-2ರ ತೀರ್ಪನ್ನು ಆದ್ಯತೆ ಮೇರೆಗೆ ಗೆಜೆಟ್ ಪ್ರಕಟಣೆ ಮಾಡುವಂತೆ ಕೋರಲಾಗಿದೆ. ಮುಂದುವರೆದು ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಬಾಕಿ ಇರಿಸಿ ರಾಜ್ಯವು ಸಲ್ಲಿಸಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ವಿವರವಾದ ಯೋಜನಾ ವರದಿಯ **appraisal** ಕಾರ್ಯವನ್ನು ತೆಗೆದುಕೊಳ್ಳುವಂತೆ ಕೇಂದ್ರ ಜಲ ಆಯೋಗಕ್ಕೆ ನಿರ್ದೇಶನ ನೀಡಲು ಮತ್ತು ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸಲು ಸಹ ಕೋರಲಾಗಿರುತ್ತದೆ.

2023-24 ಹಾಗೂ 2024-25ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಗೆ ಎಸ್.ಸಿ.ಪಿ./ಟಿ.ಎಸ್.ಪಿ.ಲೆಕ್ಕ ಶೀರ್ಷಿಕೆಯಡಿ ಅನುದಾನ ಹಂಚಿಕೆ ಮಾಡಿರುವುದಿಲ್ಲ.

(ಜಸಂಇ 21 ಡಬ್ಲ್ಯೂಬಿ.ಎಂ 2025)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು